

# ಚಾಕೊಲೇಟ್ ಕ್ವೀನ್...!

**ಕೋಕೊ ಉತ್ತಮ ಸೌಂದರ್ಯವರ್ಧಕ. ಇದನ್ನು ಬಳಸಿ ತ್ವಚೆಯನ್ನು ನುಣುಪಾಗಿಸಿಕೊಳ್ಳಬಹುದು, ಮೊಡವೆ ಬರದಂತೆ ತಡೆಯಬಹುದು, ಮುಖಕಾಂತಿ ಹೆಚ್ಚಿಸಬಹುದು, ಮುಖದ ಕಲೆ ತೆಗೆಯಬಹುದು, ಸುಕ್ಕು ನಿವಾರಿಸಬಹುದು, ಅಷ್ಟೇ ಏಕೆ ತಲೆಗೂದಲನ್ನೂ ಸೊಂಪಾಗಿಸಬಹುದು!**

■ ಪ. ರಾಮಕೃಷ್ಣ ಶಾಸ್ತ್ರಿ

ಮುಖ, ಕೈಕಾಲುಗಳ ತ್ವಚೆ ಲಕಲಕ ಹೊಳೆಯುವುದನ್ನು ಯಾರು ತಾನೆ ಇಷ್ಟಪಡುವುದಿಲ್ಲ? ಚಾಕೊಲೇಟ್ ಹೀರೊನಂತೆ ಚಾಕೊಲೇಟ್ ಕ್ವೀನ್ ಮಿಂಚುತ್ತಿದ್ದರೆ ಅಲ್ಲಿ ವಿದ್ಯುತ್ ಸಂಚಾರವೇ ಆಗುತ್ತದೆ. ಹಾಗಾದರೆ ಈ ರೀತಿ ರಾಣಿಯಂತೆ ಮೆರೆಯಬೇಕಾದರೆ ಇರುವ ಸೌಂದರ್ಯೋಪಾಯಗಳೇನು? ಒಂದು ದಾರಿ ಇದೆ. ಕೋಕೊ ಬಳಸಿ ಸೌಂದರ್ಯವೃದ್ಧಿಸಿಕೊಳ್ಳುವುದು.

ಕೋಕೊ ಬಳಸಿ ತಯಾರಿಸುವ ವಿವಿಧ ಪೇಯಗಳು, ಚಾಕೊಲೇಟ್‌ಗಳು ಸ್ವಾದದಲ್ಲಿ ಮನ ಗೆದ್ದಿರುವ ಹಾಗೆಯೇ ಕೋಕೊ ಬೀಜದ ಪುಡಿಯನ್ನು ಬಳಸಿ ಮುಖ ಸೌಂದರ್ಯವನ್ನೂ ವರ್ಧಿಸಿಕೊಳ್ಳಬಹುದು. ಕಲೆಗಳನ್ನು ನಿವಾರಿಸಿ ಹೊಳೆಯುವ ಕಾಂತಿಯುಕ್ತ ತ್ವಚೆಯನ್ನು ಪಡೆಯಲು ಅದರಿಂದ ತಯಾರಿಸುವ ಹಲವಾರು ಮುಖಲೇಪನ ಸಹಕಾರಿ.

ಕೋಕೋದಲ್ಲಿರುವ ಕ್ಯಾಟೆಚಿನ್, ಪಾಲಿಫಿನಾಲ್, ಫ್ಲವನಾಲ್ ಮುಂತಾದ ಸತ್ವಾಂಶಗಳು ಸೂರ್ಯನ ಯುವಿ ಕಿರಣಗಳಿಂದ ತ್ವಚೆಯ ಮೇಲಾಗುವ ಪ್ರತಿರೋಧವನ್ನು ತಡೆಗಟ್ಟಿ ತ್ವಚೆಯೊಳಗಿನ ನೀರಿನ ಮಟ್ಟವನ್ನು ಸುಸ್ಥಿತಿಯಲ್ಲಿಡಲು ಕಾರಣವಾಗುತ್ತವೆ. ಕಡು ಬಿಸಿಲಿಗೆ ಹೋದರೂ ಮುಖದ ತ್ವಚೆ ಒಣಗಿ ಬಿರಿಯುವ ಭಯದಿಂದ ರಕ್ಷಿಸುತ್ತದೆ. ರಕ್ತದ ಹರಿವನ್ನು ಹೆಚ್ಚಿಸಿ ತ್ವಚೆ ಸುಕ್ಕು ಬೀಳದಂತೆ ಮಾಡುತ್ತವೆ, ಹಾರ್ಮೋನುಗಳ ಅತಿರೇಕವನ್ನು ನಿಯಂತ್ರಿಸಿ, ಮೊಡವೆ, ಅಲರ್ಜಿ, ಉರಿಯೂತ ಮುಂತಾದ ಪ್ರಕ್ರಿಯೆಗಳಿಂದ ಮುಖದ ತ್ವಚೆ ಹಾನಿಗೊಳ್ಳುವುದನ್ನು ತಡೆಯಲು ಕೋಕೊ ಸಮರ್ಥವಾಗಿದೆ.

## ಮೊಡವೆಗಳಿಗೆ...

ಕಣ್ಣಿನ ಕೆಳಭಾಗದಲ್ಲಿ ಹಿಂಡುಹಿಂಡಾಗಿ ಮೊಡವೆಗಳು ಬೀಳುತ್ತಲೇ ಇರುತ್ತವೆ. ಅವು ಶಮನವಾದರೂ ಕಪ್ಪು ಕಲೆಗಳು ಉಳಿಯುತ್ತವೆ. ಮೊಡವೆಯನ್ನು ತಡೆಯಲು ಕೋಕೊ ಪುಡಿ ಒಂದು ಚಮಚ, ಒಂದೆರಡು ಹನಿ ದಾಲ್ಚೀನಿ ತೈಲ, ಒಂದು ಚಮಚ ಜೇನುತುಪ್ಪ ಸೇರಿಸಿ ಪೇಸ್ಟ್ ತಯಾರಿಸಿ. ಮೊಡವೆ ಬರುವ ಜಾಗವನ್ನು ತಣ್ಣೀರಿನಿಂದ ಸರಿಯಾಗಿ ತೊಳೆದು, ಶುಚಿಗೊಳಿಸಬೇಕು. ವೃತ್ತಾಕಾರದ ಚಲನೆಯಲ್ಲಿ ಇದನ್ನು ಅಲ್ಲಿಗೆ ದಪ್ಪವಾಗಿ ಲೇಪಿಸಬೇಕು. ಪೂರ್ತಿ ಒಣಗಿದರೆ ಅದನ್ನು ತೆಗೆಯುವಾಗ ತ್ವಚೆಗೆ ಗಾಸಿಯಾಗಬಹುದು. ಸ್ವಲ್ಪ ಹಸಿಯಿರುವಾಗಲೇ ಅದರ ಮೇಲೆ ಪನ್ನೀರು ಚಿಮುಕಿಸಿ ತೊಳೆಯಬೇಕು. ಲೇಪನ ಕಣ್ಣುಗಳ ಒಳಗೆ ಸೇರದಂತೆ ಎಚ್ಚರವಹಿಸಬೇಕು. ಮೂರು ದಿನಗಳ ಕಾಲ ಹೀಗೆ ಲೇಪಿಸಿ ಒಂದೆರಡು ವಾರ ಮತ್ತೆ ಲೇಪನ ಕೈಗೊಳ್ಳುವುದರಿಂದ ಮೊಡವೆ ಮೂಡುವುದಿಲ್ಲ, ತ್ವಚೆಯ ಅಂದಗೆಡಿಸುವ ಕಪ್ಪು ಕಲೆಯೂ ಮಾಯವಾಗುತ್ತದೆ.

## ಮುಖದ ಕಲೆಗಳಿಗೆ

ಎರಡು ಬಾರ್ ಕೋಕೊ ಚಾಕೊಲೇಟ್ ಒಂದು ಕಪ್ ಬಿಸಿ ಹಾಲಿನಲ್ಲಿ ಕರಗಿಸಬೇಕು. ಮೂರು ಚಮಚ ಕಂದು ಸಕ್ಕರೆ, ಒಂದು ಚಮಚ ಕಲ್ಲುಪ್ಪು ಬೆರೆಸಿ ಫ್ರಿಜ್ ಒಳಗಿರಿಸಿ ತಣ್ಣಗಾಗಿಸಬೇಕು. ಮುಖದಿಂದ ಕುತ್ತಿಗೆಯವರೆಗೂ ದಪ್ಪವಾಗಿ ಬ್ರಷ್ ಮೂಲಕ ಇದನ್ನು ಲೇಪಿಸಿ ಒಣಗುವ ಮೊದಲು ಎಳನೀರಿನಿಂದ ತೊಳೆಯಬೇಕು. ಕೆಲವು ದಿನ ಈ ರೀತಿ ಮಾಡುವುದರಿಂದ ತ್ವಚೆಯು ಕಲೆಗಳಿಂದ ಮುಕ್ತವಾಗಿ ಹೊಸ ಕಾಂತಿ ಪಡೆಯುತ್ತದೆ.

## ಮುಖಕಾಂತಿ ಹೆಚ್ಚಿಸಲು

ಸಮಪ್ರಮಾಣ ಕೋಕೊ ಪುಡಿ ಮತ್ತು ಮುಲ್ತಾನಿಮಿಟ್ಟಿಯನ್ನು ಮಿಶ್ರ ಮಾಡಬೇಕು. ಎರಡು ಚಮಚ ಮೊಸರು, ತಲಾ ಒಂದು ಚಮಚ ತೆಂಗಿನೆಣ್ಣೆ ಮತ್ತು ಲಿಂಬೆರಸಗಳನ್ನು ಇದಕ್ಕೆ ಸೇರಿಸಿ ಚೆನ್ನಾಗಿ ಮಥಿಸಬೇಕು. ಒಂದು ವಾರ ದಿನಕ್ಕೆ ಅರ್ಧ ತಾಸಿನ ಪ್ರಕಾರ ಈ ಮಿಶ್ರಣವನ್ನು ಮುಖಕ್ಕೆ ಹಚ್ಚಿಕೊಳ್ಳುವುದರಿಂದ ತ್ವಚೆಯ ರಂಧ್ರಗಳು ತೆರೆಯುತ್ತವೆ, ಮುಖಕಾಂತಿಯನ್ನು ಮಬ್ಬುಗೊಳಿಸುವ ಕಲ್ಮಶಗಳು ಹೊರಬಿದ್ದು ನವಕಾಂತಿ ಚಿಮ್ಮುತ್ತದೆ. ಒರಟು ತ್ವಚೆ ಕೂಡ ಬಹು ಮೃದುವಾಗುತ್ತದೆ.

## ಸುಕ್ಕು ನಿವಾರಣೆಗೆ